(ಶ್ರೀ ಡಿ. ದೇವರಾಜ್ ಅರಸ್)

(೧೧) ಕೊನೆಯಂದಾಗಿ, ಸುತ್ತೋಲೆಯಲ್ಲಿ ಜೆಎಡಿ ೩೧ ಪಿಒಲ್ ೭೨ ದಿನಾಂಕ ೨೬-೭-೧೯೭೨ರ ಪ್ರಕಾರ ಸರ್ಕಾರದ ಎಲ್ಲಾ ಸೂಚನೆಗಳನ್ನು ಜಾರಿಗೆ ತರಬೇಕೆಂದೂ ಪಂಚಾಯತ್ ಸಾಧ್ಯವಾದ ಕಡೆಗಳಲ್ಲಿ ಅವರ ಆಡಳಿತಗೊಳಪಟ್ಟಿರುವ ಇಲಾಖೆಗಳ ಅಧಿಕಾರಿಗಳಿಗೆ ಸೂಕ್ತ ಸೂಚನೆ ಕೊಡಬೇಕೆಂದೂ ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ

ಭಾಷಾಂತರ ಇಲಾಖೆಯ ಪುನರ್ವ್ಯವಸ್ಥೆಯನ್ನು ಮಂಜೂರು ಮಾಡಲಾಗಿದೆ. ಪುನರ್ವ್ಯವಸ್ಥೆಯ ನಂತರ ಭಾಷಾಂತರ ಇಲಾಖೆಯನ್ನು ಭಾಷಾ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ ಎಂದು ಕರೆಯಲಾಗಿದೆ.

ಸರ್ಕಾರಿ ಆದೇಶದ ನಂ. ಇಡಿ ೫೧ ಎಂಎಲ್‌ಸಿ ೭೩ ದಿನಾಂಕ ೪-೧೧-೧೯೭೩ರ ಪ್ರಕಾರ ೫,೫೯,೭೫೦ ರೂ.ಗಳನ್ನು ಕನ್ನಡದ ಅಭಿವೃದ್ಧಿ ಯೋಜನೆಗಳಿಗಾಗಿ ಈಗಾಗಲೇ ಮಂಜೂರು ಮಾಡಲಾಗಿದೆ.

(ಆ) ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ರಾಜ್ಯ ಸರ್ಕಾರ ಜಾರಿಗೆ ತರಲು ಇನ್ನೂ ತೆಗೆದುಕೊಳ್ಳಲಿರುವ ಕಾಲಮಿತಿಯು ?

(ಇ) ಈ ಯೋಜನೆಯನ್ನು ಕೂಡಲೇ ಜಾರಿಗೆ ತರಲು ಉಂಟಾಗಿರುವ ಅಡಚಣೆಗಳೇನು ?

(ಆ) ಕನ್ನಡವನ್ನು ಉನ್ನತ ಮಟ್ಟಗಳಲ್ಲಿ ಆಡಳಿತ ಭಾಷೆಯನ್ನಾಗಿ ಮಾಡಲು ಎಲ್ಲಾ ಪೂರ್ವಭಾವಿ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ಇದುವರೆಗೆ ಕೆಳಮಟ್ಟಗಳಲ್ಲಿ ಈ ಸಂಬಂಧದಲ್ಲಿ ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಿ ಸೂಕ್ತ ಕಾಲದಲ್ಲಿ ಕನ್ನಡವನ್ನು ರಾಜ್ಯಮಟ್ಟದಲ್ಲಿ ಆಡಳಿತ ಭಾಷೆಯನ್ನಾಗಿ ತರಲಾಗುವುದು.

(ಇ) ಕನ್ನಡ ಬೆರಳಚ್ಚು ಯಂತ್ರಗಳ ಪೂರೈಕೆಯಂ ಕಠಿಣ ಸಮಸ್ಯೆಯಾಗಿದೆ.

ಆಧಿನಿಯಮಗಳು, ನಿಯಮಾವಳಿಗಳು. ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ, ಕರ್ನಾಟಕ ಆರ್ಥಿಕ ಸಂಹಿತೆ (ಸಂಪುಟ ೧ ಮತ್ತು ೨) ಕರ್ನಾಟಕ ಖಜಾನೆ ಸಂಹಿತೆ (ಸಂಪುಟ ೧ ಮತ್ತು ೨) ಮತ್ತು ಸಾದಿಲ್ವಾರು ವೆಚ್ಚದ ಕೈಪಿಡಿ ಇವುಗಳನ್ನು ಭಾಷಾಂತರಿಸಿ, ಮುದ್ರಣ ಮಾಡಿಸಿ ಎಲ್ಲಾ ಅಧಿಕಾರಿಗಳಿಗೂ ಒದಗಿಸ ಬೇಕಾಗುತ್ತದೆ. ಈ ಕೆಲಸವನ್ನು ಕೈಕೊಳ್ಳಲಾಗಿದೆ.

ಎಲ್ಲಾ ಇಲಾಖೆಗಳ ರಿಜಿಸ್ಟರುಗಳು, ನಮೂನೆಗಳು, ನೋಟೀಸುಗಳು ಮುಂತಾದವುಗಳನ್ನು ಭಾಷಾಂತರಿಸಿ, ಎಲ್ಲಾ ಅಧಿಕಾರಿಗಳಿಗೂ ಸಾಕಾಗುವಷ್ಟು ಸಂಖ್ಯೆಯಲ್ಲಿ ಒದಗಿಸಬೇಕಾಗಿದೆ. ಆಡಳಿತ ಶಬ್ದಕೋಶವನ್ನು ಎಲ್ಲಾ ಇಲಾಖೆಗಳಿಗೆ ಕೊಡಲಾಗಿದೆ.

ಇಲಾಖಾ ಪಾರಿಭಾಷಿಕ ಶಬ್ದಕೋಶಗಳ ಕೆಲಸ ಪೂರೈಸುವುದಕ್ಕೆ ಇನ್ನು ಕೊಂಚ ಕಾಲಾವಕಾಶಬೇಕು. ಈ ಕೆಲಸವನ್ನು ತ್ವರಿತಗೊಳಿಸಲಾಗುವುದು.

ಲೆವಿ ಮೂಲಕ ಭತ್ತವನ್ನು ಖರೀದಿಸುವುದು.

(೫೨) ಶ್ರೀ ಹಿಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—

ಆಹಾರ ಹಾಗೂ ಅರಣ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಸರಕಾರ ೧೯೭೩-೭೪ನೆಯ ಸಾಲಿಗೆ ರಾಜ್ಯಾದ್ಯಂತ ಲೆವಿ ರೂಪದಲ್ಲಿ ಯಾವ ಯಾವ ಜಿಲ್ಲೆಗಳಿಂದ ಎಷ್ಟೆಷ್ಟು ಲೆವಿ ಭತ್ತವನ್ನು ಶೇಖರಿಸಬೇಕೆಂದು ನಿಗದಿ ಮಾಡಿದೆ;

(ಆ) ಈವರೆಗೆ ಶೇಖರಣೆ ಮಾಡಿದ ಲೆವಿ ಭತ್ತದ ಜಿಲ್ಲಾವಾರು ವಿವರಣೆಗಳೇನು ;

(ಇ) ಈ ಲೆವಿ ರೂಪದಲ್ಲಿ ಶೇಖರಿಸಿದ ಭತ್ತವನ್ನು ಮುಕ್ತ ಮಾರುಕಟ್ಟೆ (ಓಪನ್ ಮಾರ್ಕೆಟ್) ದರದಲ್ಲಿ ರೈತನಿಗೆ ಕೊಟ್ಟಿದ್ದರೆ ತಗಲುತ್ತಿದ್ದಂಥ ಹೆಚ್ಚು ಹಣವೆಷ್ಟು ;

(ಈ) ಲೆವಿ ಭತ್ತದ ದರವನ್ನು ಹಾಲಿ ಇರುವ ದರ ಕ್ವಿಂಟಾಲಿಗೆ ರೂ. ೮೬ ರಿಂದ ರೂ. ೧೦೦ಕ್ಕೆ ಏರಿಸಲು ರೈತರು ಮಾಡಿದ ಮನವಿಯನ್ನು ಸರ್ಕಾರ ಪರಿಶೀಲಿಸಿತೆ ? ಹಾಗಾದರೆ ಫಲಿತಾಂಶವೇನು

ಶ್ರೀ ಕೆ. ಎಚ್. ಪಾಟೀಲ್ (ಆಹಾರ ಹಾಗೂ ಅರಣ್ಯ ಮಂತ್ರಿಗಳು).—

ಉತ್ತರ.—(ಅ) ರಾಜ್ಯ ಸರಕಾರವು ೧೯೭೩-೭೪ನೇ ಬೆಳೆ ವರ್ಷದಲ್ಲಿ ಲೆವಿ ಭತ್ತ ವನ್ನು ಈ ಕೆಳಗೆ ಕಾಣಿಸಿದಂತೆ ಜಿಲ್ಲಾವಾರು ಸಂಗ್ರಹಿಸಲು ನಿಗದಿ ಮಾಡಿದೆ.

	ಜಿಲ್ಲೆ		ಗುರಿ (ಟನ್ನುಗಳಲ್ಲಿ)
೧.	ಬೆಂಗಳೂರು	...	೧,೫೦೦
೨.	ಬೆಳಗಾವಿ	...	೮,೦೦೦
೩.	ಬಳ್ಳಾರಿ		೧೨,೦೦೦
೪.	ಚಿಕ್ಕಮಂಗಳೂರು		೧೨,೦೦೦
೫.	ಚಿತ್ರದುರ್ಗ	...	೧೪,೦೦೦
೬.	ಕೊಡಗು	...	೫೦,೦೦೦
೭.	ಧಾರವಾಡ	...	೧೬,೦೦೦
೮.	ಹಾಸನ	...	೧೦,೫೮೦
೯.	ಕೋಲಾರ	...	೫,೮೦೦
೧೦.	ಮಂಡ್ಯ	...	೩೦,೦೦೦
೧೧.	ಮೈಸೂರು	...	೩೩, ೦೦
೧೨.	ಉತ್ತರ ಕನ್ನಡ	...	೧೮, ೦೮
೧೩.	ರಾಯಚೂರು	...	೨೨,೮೦೦
೧೪.	ಶಿವಮೊಗ್ಗ	...	೪೫,೮೦೦
೧೫.	ದಕ್ಷಿಣ ಕನ್ನಡ	...	೧೬,೮೦೦
೧೬.	ತುಮಕೂರು	...	೩,೦೦೦
	ಮುಂಕ್ಕಪೇಟೆಯಿಂದ ಕೊಂಡುಕೊಳ್ಳುವುದು.	...	೧,೦೦,೦೦೦
	ಒಟ್ಟು	...	೩,೫೦,೦೦೦

ಆ) ಈವರೆವಿಗೂ ಅಂದರೆ ತಾರೀಖು ೧೮-೩-೭೪ರ ವರೆಗೆ ಶೇಖರಣೆ ಮಾಡಿರುವ ಲೆವಿ ಭತ್ತದ ಜಿಲ್ಲಾವಾರು ವಿವರಗಳು ಈ ಕೆಳಕಂಡಂತೆ ಇವೆ. —

	ಜಿಲ್ಲೆ		ಶೇಖರಣೆ (ಟನ್ನುಗಳಲ್ಲಿ)
೧.	ಬೆಂಗಳೂರು.	...	೧,೫೨೧
೨.	ಬೆಳಗಾವಿ	...	೪,೧೨೩
೩.	ಬಳ್ಳಾರಿ	...	೫,೬೨೯
೪.	ಬಿದರೆ	...	೪೮
೫.	ಚಿಕ್ಕಮಂಗಳೂರು	...	೬,೮೦೭
೬.	ಚಿತ್ರದುರ್ಗ	...	೫,೦೯೧
೭.	ಕೊಡಗು	...	೭,೩೩೫
೮.	ಧಾರವಾಡ	...	೮,೫೦೨
೯.	ಗುಲ್ಬರ್ಗ	...	೯೭೨
೧೦.	ಹಾಸನ	...	೬,೧೩೩
೧೧.	ಕೋಲಾರ	...	೭೫೧
೧೨.	ಮಂಡ್ಯ	...	೧೨,೬೩೯
೧೩.	ಮೈಸೂರು	...	೧೬,೭೬೭
೧೪.	ಉತ್ತರ ಕನ್ನಡ	...	೧೩,೫೦೫
೧೫.	ರಾಯಚೂರು	...	೯,೮೦೪
೧೬.	ಶಿವಮೊಗ್ಗ		೨೧,೮೫೬

(ಶ್ರೀ ಕೆ. ಹೆಚ್. ಪಾಟೀಲ್)

೧೭.	ದಕ್ಷಿಣ ಕನ್ನಡ	...	೧೨,೬೫೭
೧೫.	ತುಮಕೂರು	...	೧,೧೮೩
	Transport levy	...	೫,೧೪೨
	ಮುಂಕ್ತ ಪೇಟೆಯಲ್ಲಿ ಕೊಂಡಿದ್ದು	...	೧೦,೫೮೮
	ಒಟ್ಟು	...	೧,೪೯,೦೯೧ ಟನ್ನುಗಳು

(೫) ಬೇರೆ ಬೇರೆ ಜಿಲ್ಲೆಗಳಲ್ಲಿ ಲೆವಿ-ವಸೂಲಿ ಸೆಪ್ಟೆಂಬರ್ ೧೯೭೩ ರಿಂದ ಪ್ರಾರಂಭವಾಗಿದ್ದು ಅಂದಿನಿಂದ ಇದುವರೆಗೆ ಮುಂಕ್ತಪೇಟೆಯಲ್ಲಿ, ಪ್ರತಿ ಜಿಲ್ಲೆಯಲ್ಲೂ ಪ್ರತಿ-ತರದ ಭತ್ತದ ದರ ಬೇರೆ ಬೇರೆಯಾಗಿದ್ದು ದರಿಂದ ರೈತನಿಗೆ ಮುಂಕ್ತಪೇಟೆಯ ದರವಲ್ಲಿ ಸಿಗಬಹುದಾದ ಹೆಚ್ಚಿನ ಹಣವನ್ನು ನಿಷ್ಕರ್ಷಿಸಲು ಸಾಧ್ಯವಿಲ್ಲ.

(ಈ) ಈಗಾಗಲೇ ಸರ್ಕಾರ ಪುನರ್‌ವಿಮರ್ಶಿತ ದರಗಳಲ್ಲಿ ಲೆವಿ ಭತ್ತವನ್ನು ಕೊಳ್ಳುತ್ತಾ ಇರುವುದರಿಂದ ಮತ್ತ ದರಗಳನ್ನು ಏರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಫಾರಂಗಳಲ್ಲಿ ದೋಷರಹಿತ ಆಲೂಗಡ್ಡೆ ಬೀಜ ಉತ್ಪಾದನೆ.

(೭೩) ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—

ಕೃಷಿ ಹಾಗೂ ಪಶುಸಂಗೋಪನ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ರಾಜ್ಯದ ಯಾವ ಯಾವ ಕೃಷಿ ಫಾರಂಗಳಲ್ಲಿ ದೋಷರಹಿತ ಬಿತ್ತನೆ ಆಲೂಗಡ್ಡೆ ಬೀಜ ಉತ್ಪಾದನೆಯಾಗುತ್ತದೆ ? ಎಷ್ಟು ಪ್ರಮಾಣದಲ್ಲಿ ?

(ಆ) ಒಂದು ಎಕರೆ ಪ್ರದೇಶದಲ್ಲಿ ಹೊಷರಹಿತ ಬಿತ್ತನೆ ಮಾಡಲು ಎಷ್ಟು ಹಣ ಖರ್ಚಾಗುತ್ತದೆ ? ಎಷ್ಟು ಉತ್ಪತ್ತಿ ಬರುತ್ತದೆ,

(ಇ) ರಾಜ್ಯದ ಎಷ್ಟು ಎಕರೆ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯಾಗುತ್ತದೆ ;

(ಈ) ಈ ಬಿತ್ತನೆಗೆ ಎಷ್ಟು ಪ್ರಮಾಣದ ಆಲೂಗಡ್ಡೆ ಬಿತ್ತನೆ ಬೀಜ ಬೇಕು ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಹಾಗೂ ಪಶುಸಂಗೋಪನ ಮಂತ್ರಿಗಳು).—

ಉತ್ತರ.—(ಅ).—

ಕೃಷಿ ಫಾರಂಗಳ ಹೆಸರುಗಳು		೧೯೭೨ನೆಯ ಸಾಲಿನಲ್ಲಿ ಆದ ಬೀಜ ಉತ್ಪಾದನೆಯ ಪ್ರಮಾಣ
ಹಾಸನ	...	೧೦೧·೧೯೫
ಬಿಳಿಗಿರಿರಂಗನಬೆಟ್ಟ	...	೮.೪೫೮
ಮಾದಾಪುರ	...	೫.೯೬೧
ಚಿಕ್ಕಬಳ್ಳಾಪುರ	...	೧೫೫.೭೩೦
ಊಟಿ	...	ಏನೂ ಇಲ್ಲ

(ಆ) ಒಂದು ಎಕರೆ ಪ್ರದೇಶದಲ್ಲಿ ಆಲೂಗಡ್ಡೆ ಬೀಜ ಉತ್ಪಾದಿಸಲು ೧,೮೦೦ ರೂ. ನಿಂದ ೨,೦೦೦ ರೂ. ವರೆಗೆ ಖರ್ಚಾಗುತ್ತದೆ. ಒಂದು ಎಕರೆ ಪ್ರದೇಶದಲ್ಲಿ ಸರಾಸರಿ ೪ ಟನ್ ನಷ್ಟು ಆಲೂಗಡ್ಡೆ ಬೀಜ ಉತ್ಪತ್ತಿ ಬರುತ್ತದೆ.

(ಇ) ಸುಮಾರು ೫೨,೦೦೦ ಎಕರೆ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯಾಗುತ್ತದೆ.

(ಈ) ೨೨,೦೦೦ ರಿಂದ ೨೫,೦೦೦ ಟ್ಗಗಳಷ್ಟು ಬಿತ್ತನೆ ಆಲೂಗಡ್ಡೆ ಬೇಕಾಗುತ್ತದೆ.